

# ಮುದುಡಿದ ಮನ ಅರಳುವುದೇ?

## ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ

■ ಡಾ.ಕೆ.ಎಸ್. ಶುಭ್ರತಾ

**ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ಪರಿಣಾಮ ಅತ್ಯಂತ ನೈಜ ಮತ್ತು ಭಯಂಕರವಾದದ್ದು. ಇದು ಮುಂದೆ ಮಗುವಿನ ಮಾನಸಿಕ ಬೆಳವಣಿಗೆಗೆ ಕಾರಣವಾಗುತ್ತದೆ. ಮನಸ್ಸಿನ ಆಳದಲ್ಲಿ ಮೂಡಿದ ಭಯ ಮುಂದೆ ಖಿನ್ನತೆ, ಕೀಳರಿಮೆಗಳಂತಹ ಮಾನಸಿಕ ಸಮಸ್ಯೆಗಳನ್ನೂ ಹುಟ್ಟುಹಾಕಬಹುದು.**

‘ಆ ಕ್ಷಣಗಳನ್ನು ನೆನೆಸಿಕೊಂಡರೆ ಈಗಲೂ ಮೈ ನಡುಕ ಬರುತ್ತದೆ. ನಾನಾಗ ಎಂಟು ವರ್ಷದ ಹುಡುಗಿ. ನನಗೆ ನನ್ನ ದೇಹದ ಭಾಗಗಳಷ್ಟೇ ತಿಳಿದಿತ್ತು. ಎಷ್ಟೋ ಆಟಗಳ ಬಗ್ಗೆ ಅರಿವಿತ್ತು. ಆದರೆ ಈ ಆಟ ಗೊತ್ತಿರಲಿಲ್ಲ. ಮನೆಯಲ್ಲೇ ಇದ್ದ ಮಾವ ಈ ಆಟ ಕಲಿಸಿದ್ದ. ದೇಹದ ತುಂಬೆಲ್ಲಾ ಕಚಗುಳಿ ಇಡುವ ಆಟ. ಕಚಗುಳಿ ಕೊಡುವ ಕೈ, ನನ್ನ ಖಾಸಗಿ ಅಂಗಗಳನ್ನೂ ಮುಟ್ಟಿದಾಗ ಏನೋ ಮುಜುಗರ. ಆದರೆ ಹೇಳಿಕೊಳ್ಳುವುದಕ್ಕೆ ಗೊತ್ತಾಗುತ್ತಿರಲಿಲ್ಲ. ಇದೇ ಆಟದ ಮುಂದುವರೆದ ಭಾಗವಾಗಿ, ಆ ಮಾವನಿಗೆ ನಾನು ಕಚಗುಳಿ ಕೊಡಬೇಕಾಗಿತ್ತು. ಅವನ ಗುಪ್ತ ಭಾಗಗಳನ್ನು ಅವನು ತೋರಿಸಿದಾಗ ‘ಛೀ...’ ಎಂದು ಅಸಹ್ಯ ಭಾವ ಮೂಡಿತ್ತು. ಆದರೂ ಅವನು ನನ್ನನ್ನು ಬಿಟ್ಟಿರಲಿಲ್ಲ...’ ಎಂದು ಇಪ್ಪತ್ತಾರು ವರ್ಷದ ಶಾಲಿನಿ ನನ್ನ ಮುಂದೆ ಬಿಕ್ಕಿ ಬಿಕ್ಕಿ ಅಳುತ್ತಿದ್ದಾಗ, ಮನೋವೈದ್ಯೆಯಾಗಿ ಎದುರಿಗೆ ಕುಳಿತು ಆಲಿಸುತ್ತಿದ್ದ ನನ್ನ ಕಣ್ಣಂಚಿನಲ್ಲಿ ನೀರು.

ಸುಮಾರು ಎರಡು ತಿಂಗಳ ಹಿಂದೆ ಈ ಶಾಲಿನಿಯನ್ನು ಅವರ ಅಪ್ಪಅಮ್ಮ ನನ್ನ ಬಳಿ ಕರೆತಂದಿದ್ದರು. ಈಗೆರಡು ವರ್ಷಗಳಿಂದ ಯಾವುದೇ ಹುಡುಗನನ್ನು ತೋರಿಸಿದರೂ ಶಾಲಿನಿ ಮದುವೆಗೆ ಒಪ್ಪುತ್ತಿರಲಿಲ್ಲ. ವೃತ್ತಿಯಿಂದ ಇಂಜಿನಿಯರ್. ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಕೈ ತುಂಬಾ ಸಂಬಳದ ಕೆಲಸ. ನೋಡುವುದಕ್ಕೂ ಅಂದವಾಗಿದ್ದಳು. ‘ಹೇಗಾದರೂ ಮದುವೆಗೆ ಒಪ್ಪಿಸಿ’ ಎಂಬ ಬೇಡಿಕೆ ಆ ತಂದೆತಾಯಿಯರದು.

ನಾನಂತೂ ‘ಮದುವೆಗೆ ಒಪ್ಪಿಸುವುದು ನನ್ನ ಕೆಲಸವಲ್ಲ, ಅವಳಿಗೆ ಇರಬಹುದಾದ ಸಮಸ್ಯೆಗಳನ್ನು ತಿಳಿದು, ಪರಿಹರಿಸಲು ಪ್ರಯತ್ನಿಸುತ್ತೇನೆ’ ಎಂದು ಹೇಳಿ ನನ್ನ ಥೆರಪಿ (ವಿಶೇಷ ಆಪ್ತಸಮಾಲೋಚನೆ) ಪ್ರಾರಂಭಿಸಿದ್ದೆ. ಸುಮಾರು ಎಂಟು ಅವಧಿಗಳನ್ನು ಕಳೆದರೂ ಶಾಲಿನಿ ಅದು ಇದು ಮಾತನಾಡುತ್ತಾ ಸಮಯ ಕಳೆಯುತ್ತಿದ್ದಳೇ ಹೊರತು, ಮದುವೆಯ ಬಗ್ಗೆ ಚರ್ಚಿಸುತ್ತಲೇ ಇರಲಿಲ್ಲ. ಎಂಟು ಸೆಶನ್‌ಗಳಾದ ನಂತರ ನಾನೇ ನೇರವಾಗಿ ಈ ವಿಷಯದ ಬಗ್ಗೆ ಕೇಳಿದಾಗ, ಅಚಾನಕ್ಕಾಗಿ ‘ನಿಮಗೇನೋ ನನ್ನ ಒಂದು ರಹಸ್ಯ ಹೇಳುತ್ತೇನೆ ಮೇಡಂ’ ಎಂದು ತನ್ನ ಬಾಲ್ಯದ ಮಾವನೊಂದಿಗಿನ ಈ ಆಟದ ವಿವರ ಹೇಳತೊಡಗಿದ್ದಳು. ಸ್ವಲ್ಪ ಹೇಳಿ